ಸಿಸಿ ನಂಃ 170/2025
ಸಿ.ಡಬ್ಲೂ 3/ಪಿ.ಡಬ್ಲೂ 3

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿದ್ದಪ್ಪ ಮಾದರ |
| ತಂದೆಯ ಹೆಸರು | ಃ | ಕರೆಪ್ಪ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಕೇಲಗೇರಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **18-10-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಚಾಸಾ-2 ಗೊತ್ತು . ಒಂದು ವರ್ಷದ ಹಿಂದೆ ಪೊಲಿಸರು ನನ್ನನ್ನು ಸಂಪಿಗೆ ನಗರದ ಬಸ್ ಸ್ಟಾಪ್ ಬಳಿ ಕರೆದು ಕೆಲವು ದಾಖಲೆಗಳಿಗೆ ಸಹಿ ಪಡೆದು ನಂತರ ಮರಳಿ ಸಂಚಾರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಕೆಲವು ದಾಖಲೆಗಳಿಗೆ ಸಹಿ ಪಡೆದು ಪೋಟೋ ತೆಗೆಸಿದರು . ಅದು ಯಾವ ಕಾರಣಕ್ಕಾಗಿ ಪೋಟೊ ತೆಗೆದರು ಮತ್ತು ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ . ಸಾಕ್ಷಿಯು ಗುರುತಿಸಿದ ಪೊಲಿಸರ ನೋಟಿಸನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು . ಸಾಕ್ಷಿಯ ಸಹಿಯನ್ನು ನಿಪಿ-7 (ಬಿ) ಎಂದು ಗುರುತಿಸಲಾಯಿತು , ಸಾಕ್ಷಿಯು ಗುರುತಿಸಿದ ಸ್ಥಳ ಪಂಚನಾಮೆ ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-8 (ಬಿ) ಎಂದು ಗುರುತಿಸಲಾಯಿತು , ಅದೇ ವೇಳೆಗೆ ತೆಗೆದ ಪೋಟೋವನ್ನು ನಿಪಿ-2 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಯು ಜಪ್ತಿ ಪಂಚನಾಮೆಯ ವೇಳೆಗೆ ನೀಡಿದ ನೋಟಿಸ ಮತ್ತು ಅದರಲ್ಲಿನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-9 (ಬಿ) ಎಂದು ಗುರುತಿಸಲಾಯಿತು .

ಸಿಸಿ ನಂಃ 170/2025
ಸಿ.ಡಬ್ಲೂ 3/ಪಿ.ಡಬ್ಲೂ 3

ಸಾಕ್ಷಿಯು ಆಟೋ ರಿಕ್ಷಾ ಜಪ್ತಿ ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-10 (ಬಿ) ಎಂದು ಗುರುತಿಸಲಾಯಿತು . ಅದೇ ವೇಳೆಗೆ ತೆಗೆದ 5 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-11 ರಿಂದ 15 ಎಂದು ಗುರುತಿಸಲಾಗಿದೆ .

ಸಾಕ್ಷಿಯು ಲಾರಿ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-16 (ಬಿ) ಎಂದು ಗುರುತಿಸಲಾಯಿತು . ಅದೇ ವೇಳೆಗೆ ತೆಗೆದ 5 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-17 ರಿಂದ 21 ಎಂದು ಗುರುತಿಸಲಾಗಿದೆ. ಪೊಲಿಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆ, ವಾಹನಗಳ ಜಪ್ತಿ ಪಂಚನಾಮೆ ಹಾಗೂ ಶವ ಪಂಚನಾಮೆ ಮಾಡಿರುವುದಿಲ್ಲ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 20.10.2024 ರಂದು ಪೊಲಿಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆಯಿಸಿದರು ಎಂದರೆ ಸರಿಯಲ್ಲ . ಅಲ್ಲಿ ಚಾಸಾ-1 ರವರು ಹಾಜರಿದ್ದು ಅಪಘಾತ ಸ್ಥಳ ತೊರಿಸಿದ ಮೇರೆಗೆ ಪೊಲಿಸರು ನಿಪಿ-7 ರಂತೆ ನನಗೆ ನೋಟಿಸ ನೀಡಿ ಬೆಃ 8.30 ರಿಂದ 8.53 ವರೆಗೆ ನಿಪಿ-8 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ . ಅದೇ ವೇಳೆಗೆ ನಿಪಿ-2 ರಿಂದ 5 ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ . ನಂತರ ಮರಳಿ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಠಾಣಾ ಆವರಣದಲ್ಲಿದ್ದ ಆಟೋ ರಿಕ್ಷಾ ಸಂಖ್ಯೆ ಕೆಎ-25/ಡಿ-3725 ನ್ನು ನಿಪಿ-9 ರಂತೆ ನೋಟಿಸ ನೀಡಿ ಮಃ 1.00 ರಿಂದ 1.18 ವರೆಗೆ ನಿಪಿ-10 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು

ಎಂದರೆ ಸರಿಯಲ್ಲ . ಆ ಸಮಯಕ್ಕೆ ನಿಪಿ-11 ರಿಂದ 15 ರಂತೆ ಪೋಟೋ ತೆಗೆಯಿಸಿದರು ಎಂದರೆ ಸರಿಯಲ್ಲ . ಅದೇ ವೇಳೆಗೆ ಚಾಸಾ-18 ರವರು ಹಾಜರುಪಡಿಸಿದ ಲಾರಿ ನಂ: ಜಿಎ-06/ಟಿ-9097 ನ್ನು ಮ: 1.30 ರಿಂದ 1.47 ವರೆಗೆ ನಿಪಿ-16 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ . ಆ ಸಮಯಕ್ಕೆ ನಿಪಿ-17 ರಿಂದ 21 ರಂತೆ ಪೋಟೋ ತೆಗೆಯಿಸಿದರು ಎಂದರೆ ಸರಿಯಲ್ಲ . ನಂತರ ಕಿಮ್ಸ ಆಸ್ಪತ್ರೆಯಲ್ಲಿ ಮೃತ ರಮೇಶ ಇವರ ಶವ ಪಂಚನಾಮೆಯನ್ನು ಮಾಡಿದರು ಎಂದರೆ ಸರಿಯಲ್ಲ . ಈ ಎಲ್ಲಾ ಮಾಹಿತಿಗಳು ನನಗೆ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲು: ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಆರೋಪಿ ಪರ ಪಾಟೀಸವಾಲು ಇಲ್ಲ ಎಂದು ಹೇಳುತ್ತಾರೆ .

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.